ತಿದ್ದಲು ನೋಡಿದ್ದೆ. ಆದರೆ, ಎಲ್ಲರೂ ಹಾಗೇ ತಿಳಿದುಕೊಂಡಿದ್ದಾರೆ ಎಂದು ತಿಂಗಳುಗಳ ನಂತರ ಪ್ರಾದೇಶಿಕ ಕಚೇರಿಯ ಅಫೀಸರ್ ಸುಜಾತಾ ಫೋನ್ ಮಾಡಿದಾಗ ತಿಳಿಯಿತು.

ಸಂಜೆ ಬೈಕಲ್ಲಿ ಯೂನಿಯನ್ ಅಫೀಸಿಗೆ ಹೊರಡುವಾಗ ಮೊಬೈಲ್‌ಗೆ ಸುಜಾತಾ ಅವರ ಕರೆ ಬಂತು.

'ನಿಮ್ಮ ಕ್ಯಾಂಡಿಡೇಟ್ ಹಾಸ್ಪಿಟಲ್‌ಗೆ ಅಡ್ಮಿಟ್ ಆಗಿದ್ದಾರೆ, ತಕ್ಷಣ ಬನ್ನಿ' ಎಂದರು. ಸುಜಾತಾ ಅಷ್ಟೇನೂ ಪರಿಚಿತರಲ್ಲ. ಅವರ ಮಾತಿನ ವ್ಯಂಗ್ಯ ಅರ್ಥವಾದರೂ ತಲೆ ಕೆಡಿಸಿಕೊಳ್ಳದೆ, ಏನಾಯಿತು ಎಂದು ವಿಚಾರಿಸಿದೆ.

'ಇಲ್ಲೇ ಬನ್ನಿ' ಎಂದು ಆಸ್ಪತ್ರೆಯ ಲೊಕೇಶನ್ ಕಳಿಸಿದರು.



ಇತ್ತೀಚೆಗೆ ಚೈತ್ರಾ ಫೋನ್ ಮಾಡುತ್ತಿರಲಿಲ್ಲ. ಅವಳಿಗೇನಾಯಿತು ಎನ್ನುವ ಆತಂಕದಲ್ಲೇ ಆಸ್ಪತ್ರೆಗೆ ಹೋದೆ. ಲಾಂಜಲ್ಲಿ ಕಾಯುತ್ತಿದ್ದ ಸುಜಾತಾ ನನ್ನನ್ನು ಕಂಡಕೂಡಲೇ ಎದ್ದು, ಗಿಜಿಗುಟ್ಟುತ್ತಿದ್ದ ಆಸ್ಪತ್ರೆಯಲ್ಲಿ ಜನರಿಲ್ಲದ ಜಾಗ ಹುಡುಕಿ ನಡೆದದ್ದನ್ನು ವಿವರಿಸಿದರು.

ಚೈತ್ರಾ ಬೆಳಿಗ್ಗೆ ಅಫೀಸಿಗೆ ಬಂದಾಗ ಸುಸ್ತಾದಂತೆ ಕಾಣುತ್ತಿದ್ದಳಂತೆ. ಕೆಲವು ದಿನಗಳಿಂದ ಮಂಕಾಗಿದ್ದ ಆಕೆಯನ್ನು ಸುಜಾತಾ ಮಾತನಾಡಲು ಯತ್ನಿಸಿದಾಗ ಸರಿಯಾದ ಉತ್ತರ ಸಿಕ್ಕಿರಲಿಲ್ಲ. ವೈಯಕ್ತಿಕ ಸಮಸ್ಯೆ ಇರಬಹುದೆಂದು ಕೆದಕಲು ಹೋಗಿರಲಿಲ್ಲ.

ಮಧ್ಯಾಹ್ನದ ಸುಮಾರಿಗೆ ಕೆಲಸದ ನಡುವೆ ಎದ್ದು ಹೋದವಳನ್ನು ಸುಜಾತಾ ಗಮನಿಸಿದ್ದಾರೆ. ಎಷ್ಟು ಹೊತ್ತಾದರೂ ವಾಪಸ್ಸು ಬಂದಿರಲಿಲ್ಲ. ಸುಜಾತಾ ಲೇಡಿ ಅಟೆಂಡರನ್ನು ಕರೆದು ಚೈತ್ರಾ ಎಲ್ಲಿದ್ದಾಳೆ ಎಂದು ನೋಡಿ ಬರಲು ಹೇಳಿದ್ದಾರೆ. ಆಕೆ ಸ್ವಲ್ಪ ಹೊತ್ತಲ್ಲೇ ಗಾಬರಿಯಿಂದ ಓಡಿ ಬಂದು ವಾಷ್‌ರೂಮಲ್ಲಿ ಕುಸಿದು ಬಿದ್ದಿರುವುದನ್ನು ತಿಳಿಸಿದ್ದಾರೆ. ಹೋಗಿ ನೋಡಿದಾಗ ನೆಲದಲ್ಲಿ ರಕ್ತ ಚೆಲ್ಲಿದ್ದು, ಬಟ್ಟೆ ರಕ್ತಮಯವಾಗಿತ್ತು. ಅವರು ತಡ ಮಾಡದದೇ ಆಂಬ್ಯುಲೆನ್ಸ್‌ಗೆ ಫೋನ್ ಮಾಡಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದಾರೆ.

ವಾಷ್‌ರೂಮಿಗೆ ಸ್ಟಿಕ್ ಹಿಡಿಯದೆ ಹೋಗಿ ಬಿದ್ದಿರಬಹುದು. ಒದ್ದೆ ನೆಲದಲ್ಲಿ ಕಾಲು ಜಾರಿರಬಹುದು ಎಂದು ಊಹಿಸಿ, 'ಬಿದ್ದು ಪೆಟ್ಟಾಗಿದೆಯೇ?' ಕೇಳಿದೆ.

'ಬಿದ್ದಿದ್ದಲ್ಲ, ಇದೇ ಬೇರೆ' ಎಂದರು. ನನಗೆ ತಲೆಬುಡ ತಿಳಿಯಲಿಲ್ಲ.

'ಅಂದರೆ?'

'ಶಿ ಈಸ್ ಕ್ಯಾರಿಯಿಂಗ್' ಸುಜಾತಾ ನನ್ನನ್ನು ಅನುಮಾನದಲ್ಲಿ ನೋಡುತ್ತಾ ಹೇಳಿದರು.

'ಓಹ್. ಹೀಗೇಕೆ ಮಾಡಿಕೊಂಡಳು!'

'ಈಗೇನು ಮಾಡುವುದು ಹೇಳಿ?' ನನಗೇ ಕೇಳಿದರು.

'ಡಾಕ್ಟರ್ ಏನು ಹೇಳಿದರು?'

'ಬ್ಲೀಡಿಂಗ್ ಕಡಿಮೆಯಾಗಿದೆ. ರಿಲೇಟಿವ್ಸ್ ಇದಾರ ಕೇಳಿದ್ದಾರೆ'

'ಬೆಂಗ್ಳೂರಲ್ಲಿ ಯಾರೂ ಇಲ್ಲ. ಅಪ್ಪಅಮ್ಮ ಊರಲ್ಲಿ ಇದಾರೆ'

'ಅವರ ಫೋನ್ ನಂಬರ್ ಇದ್ಯಾ?'

ಸುಜಾತಾಗೆ ಇಲ್ಲ ಎಂದು ಹೇಳಿದೆ. ಆಕೆ ಇದು ನಾವು ನೀವು ಇತ್ಯರ್ಥ ಮಾಡುವ ವಿಷಯ ಅಲ್ಲ, ಅವಳ ಪೋಷಕರಿಗೆ ತಿಳಿಸಿ ಮುಂದೇನು ಮಾಡಬೇಕು ಎಂದು ತೀರ್ಮಾನಿಸಬೇಕು ಎಂದರು.

ನಾನು ಚೈತ್ರಾಳನ್ನು ನೋಡಲು ಹೋದಾಗ ಎಚ್ಚರವಾಗಿಯೇ ಇದ್ದಳು. ಐ.ವಿ ಹಾಕಿದ್ದರು. ತೊಟ್ಟುತೊಟ್ಟು ದ್ರವ ನಳಿಕೆಯಲ್ಲಿ ಇಳಿಯುತ್ತಿತ್ತು. ಬಾಡಿದ ಮುಖದಲ್ಲಿ ನೋವಿನ ಗೆರೆಗಳು ಕಾಣುತ್ತಿದ್ದವು. ಮೆತ್ತಗೆ ಕೈ ಮುಟ್ಟಿದೆ. ನಾನು ಬಂದಿರುವುದು ಅರಿವಾಗಿ ನನ್ನ ಕಡೆ ಮುಖ ತಿರುಗಿಸಿದಳು. ಕೆನ್ನೆಯ ಮೇಲೆ ಹನಿಗಳು ಜಾರಿದವು. ನನಗೆ ಏನು ಹೇಳಬೇಕೆಂದೇ ತೋಚಲಿಲ್ಲ. ಹೆಚ್ಚು ಹೊತ್ತು ನಿಲ್ಲಲಾರದೆ ನಾಳೆ ಸಿಗುತ್ತೇನೆ ಎಂದಷ್ಟೇ ಹೇಳಿ ಬಂದೆ.

ಹಲವು ಆಸೆಗಳನ್ನು ಕಟ್ಟಿಕೊಂಡಿದ್ದ ಚೈತ್ರಾ ಹೀಗೇಕೆ ಮಾಡಿಕೊಂಡಳು ಎಂದು ಚಿಂತೆಯಾಯಿತು. ಯಾರನ್ನಾದರೂ ಪ್ರೀತಿ ಮಾಡುತ್ತಿದ್ದರೆ ತಪ್ಪಲ್ಲ. ಅವನನ್ನು ಕರೆಸಿ ವಿಷಯ ತಿಳಿಸಿದರಾಯಿತು ಎಂದು ಸಮಾಧಾನ ಪಟ್ಟುಕೊಂಡೆ. ಆದರೆ ಮಾರನೇ ದಿನ ಸುಜಾತಾ ಹೇಳಿದ್ದೇ ಬೇರೆ!

ಚೈತ್ರಾ ಪ್ರೆಗ್ನೆಸ್ಸಿ ಟರ್ಮಿನೇಟ್ ಮಾಡಿ ಎಂದು ಗೋಗರೆಯುತ್ತಿದ್ದಾಳೆ, ಕಾರಣ ಹೇಳುತ್ತಿಲ್ಲ.